(ಸದನವು ಸಂಜೆ 7 ಗಂಟೆ 21 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ: 7-2-2013 ರಂದು ಬೆಳಿಗ್ಗೆ: 10.00 ಗಂಟೆಗೆ ಸಮಾವೇಶಗೊಳ್ಳುವಂತೆ ತೀರ್ಮಾನಿಸಿತು)

(ಆ) ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳು

ಕರ್ನಾಟಕ ವಿಧಾನ ಸಭೆ

ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ

ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 19 : (36)

ಶ್ರೀ ಕುಮಾರಸ್ವಾಮಿ ಕೆ .ಜಿ. (ಶಿವಮೊಗ್ಗಗ್ರಾಮಾಂತರ)

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಬಾಗಲಕೋಟೆ ಇವರು ಸಂವಿಧಾನದ 311 ನೇ ವಿಧಿಯನ್ನು ಉಲ್ಲಂಘಿಸಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಲ್ಲಿನ ಮಹಿಳಾ ಶಿಕ್ಷಕಿಯರನ್ನು ಸೇವೆಯಿಂದ ವಜಾ ಮಾಡುತ್ತಿರುವ ಬಗ್ಗೆ ಹಾಗೂ ಮಹಿಳಾ ದೌರ್ಜನ್ಯ ಎಸಗುತ್ತಿರುವ ಬಗ್ಗೆ ಮಹಿಳಾ ಶಿಕ್ಷಕರಿಂದ ಸರ್ಕಾರಕ್ಕೆ ದೂರುಗಳು ಬಂದಿವೆಯೇ (ವಿವರ ಒದಗಿಸುವುದು)

ಆ) ಮಹಿಳಾ ಶಿಕ್ಷಕಿಯರೊಬ್ಬರು ತಾವು ಗರ್ಭಿಣಿಯಾಗಿದ್ದೇವೆಂದು ವೈದ್ಯಕೀಯ ವಿಶ್ರಾಂತ ರಜೆ ಬೇಕೆಂದು ಮನವಿ ಮಾಡಿದ್ದರೂ, ನಿಯಮಾನುಸಾರ ರಜಾ ಮಂಜೂರು ಮಾಡದೇ ಸದರಿ ನೌಕರರನ್ನು ಸೇವೆಯಿಂದ ವಜಾ ಮಾಡಿರುವ ಹಿನ್ನಲೆಯಲ್ಲಿ ಸ್ಥಳೀಯ DDPI ಮತ್ತು

BEO ಗಳ ವಿರುದ್ಧ ತಲಾ 10.00 ಲಕ್ಷರೂ.ಗಳ ಮಾನಸಿಕ ಪರಿಹಾರ ಕೋರಿ ಮೇಲಾಧಿಕಾರಿಗಳಿಗೆ ಮನವಿ ಮಾಡಿಕೊಂಡು 2 ವರ್ಷಗಳಾಗಿದ್ದರೂ ವಿಳಂಬ ನೀತಿ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಈ ಪ್ರಕರಣವನ್ನು ಮಹಿಳಾ ಆಯೋಗಕ್ಕೆ ವಹಿಸಿ ಇತ್ಯರ್ಥಪಡಿಸಲು ಸರ್ಕಾರ ಕ್ರಮ ವಹಿಸುವುದೇ;

ಈ) ಮೇಲಾಧಿಕಾರಿಗಳ ಕಿರುಕುಳಕ್ಕೆ ಒಳಗಾಗಿರುವ ಈ ಮಹಿಳಾ ಶಿಕ್ಷಕಿಯನ್ನು ಬೆಳಗಾವಿ ವಿಭಾಗದಿಂದ ಹೊರಕ್ಕೆ ವರ್ಗಾಯಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ)ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಬಂದಲ್ಲಿ ಪರಿಶೀಲಿಸಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಪಶು ಸಂಚಾರಿ ಆಸ್ಪತ್ರೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 4 (40)

ಡಾ. ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಅ) ರಾಜ್ಯದಲ್ಲಿರುವ ಪಶು ಸಂಚಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಸ್ಥಳ ಮತ್ತು ಪ್ರಾರಂಭಿಸಿದ ದಿನಾಂಕ ಸಹಿತ ವಿವರ ನೀಡುವುದು);